ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 4, Jan-Feb, 2023, Pp. 63-70.
©*IIMRD*, Mysuru
IIMRD JOURNALS
www.iimrd.com

# ನಾಗತಿ ಹೆಸರಿನ ವ್ಯಕ್ತಿನಾಮಗಳು ಮತ್ತು ಸ್ಥಳನಾಮಗಳು: ಚಾರಿತ್ರಿಕ ಅವಲೋಕನ

ರಮ್ಯ ಎನ್.ಆರ್.*
*ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹೊಸಪೇಟೆ. ವಿಜಯನಗರ ಜಿಲ್ಲೆ.

***ಸಾರಾಂಶ: (Abstract)***

ಪ್ರಸ್ತುತ ಲೇಖನವು ನಾಗತಿ ಹೆಸರಿನ ವ್ಯಕ್ತಿನಾಮ ಮತ್ತು ಸ್ಥಳನಾಮಗಳ ಕುರಿತು ತಿಳಿಸುವ ಪ್ರಯತ್ನವಾಗಿದೆ. ಪಾಳೆಯಗಾರರ ಕಾಲದ ಮಹಿಳೆಯರಿಗೆ ವಿಶೇಷವಾಗಿ 'ನಾಗತಿ' ಎಂಬ ಪದದ ಬಳಕೆಯನ್ನು ಕಾಣಬಹುದಾಗಿದೆ. ಮುಖ್ಯವಾಗಿ ನಾಗತಿ ಎನ್ನುವುದು ಅಧಿಕಾರ ಸೂಚಿತ ಪದವಾಗಿದೆ. ಹಾಗೂ ಸ್ಥಾನ ಸೂಚಕವಾದಂತಹ ನಾಮವಾಗಿ ಈ ನಾಗತಿ ಪದವನ್ನು ತಿಳಿಯಲಾಗಿದೆ. ಹೆಣ್ಣು ಮಕ್ಕಳ ಹೆಸರನ್ನು ಶಾಶ್ವತವಾಗಿ ಸ್ಮರಿಸಬೇಕು ಎಂಬ ಉದ್ದೇಶದಿಂದ ಪಾಳೆಯಗಾರರ ಪಟ್ಟದ ರಾಣಿಯರಿಗೆ ವಿಶೇಷವಾಗಿ ನಾಗತಿ ಎಂದು ಕರೆಯುತ್ತಿದ್ದರು. ನಾಗತಿ ಎಂಬ ಪದದ ಹಿನ್ನೆಲೆ, ದಾಖಲೆಗಳಲ್ಲಿ ಸ್ಪಷ್ಟತೆ ಸಿಗದಿರುವುದು ದುಃಖಕರ ಸಂಗತಿ, ನಾಗತಿಯರು ದಕ್ಷತೆಯಿಂದ, ಧೈರ್ಯದಿಂದ ಪರಾಕ್ರಮದಿಂದ ರಾಜ್ಯ ಆಳಿದರು, ಕಾಲ ಬದಲಾದಂತೆ ನಾಗತಿ ಪದವನ್ನು ಮರೆತಿರುವ ಪಾಳೆಯಗಾರರ ಬಗ್ಗೆ ಪ್ರಸ್ತುತ ಲೇಖನದಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

***ಮುಖ್ಯಪದಗಳು: (Keywords)*** ನಾಯಕಿ, ನಾಗತಿ, ನಾಗತಿಯಮ್ಮ, ನಾಗತಿಹಳ್ಳಿ, ನಾಗತಿಕೆರೆ.

**ಪೀಠಿಕೆ**

ಮನುಷ್ಯನ ಆರಂಭ ಕಾಲದಿಂದ ತನ್ನ ಜೀವನ ವಿಧಾನದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಂಡು ನಾಗರಿಕನಾಗಿ ಹೊಸ ಆಲೋಚನೆಗಳ ದಿಕ್ಕಿಗೆ ತನ್ನ ಚಿತ್ತವನ್ನು ಕೇಂದ್ರೀಕರಿಸಿಕೊಂಡು ಮುನ್ನಡೆಯುತ್ತಿರುವ ಈ ಸಂದರ್ಭದಲ್ಲಿ ತಾನು ಸಂವಹನ ಸಾಧನವಾಗಿ ಬಳಸಿಕೊಂಡ ಹೆಸರುಗಳಲ್ಲಿ ಬದಲಾವಣೆಗಳಾಗಿರುವುದನ್ನು ಗುರುತಿಸಬಹುದಾಗಿದೆ. ವ್ಯಕ್ತಿನಾಮಗಳ ಬೆಳವಣಿಗೆಯನ್ನು ಆರಂಭ ಕಾಲದಿಂದ ಗಮನಿಸುತ್ತ ಬಂದರೆ ಇವು ಮನುಷ್ಯನ ಅವಿಭಾಜ್ಯ ಅಂಗಗಳಾಗಿ ಕಂಡುಬರುತ್ತವೆ. ಇಂತಹ ವಿಶಿಷ್ಟತೆ ಹೊಂದಿರುವ ವ್ಯಕ್ತಿನಾಮಗಳು ಮತ್ತು ಸ್ಥಳನಾಮಗಳು ಬದಲಾಗುತ್ತಿರುವುದನ್ನು ಕಾಣುತ್ತೇವೆ. ಪ್ರತಿ ಜನಾಂಗಕ್ಕೂ ತನ್ನದೇ ಆದ ಚರಿತ್ರೆ ಇರುವಂತೆ ನಾಯಕ(ಬೇಡ) ಜನಾಂಗಕ್ಕೂ ವಿಶಿಷ್ಟವಾದ ಚರಿತ್ರೆ ಇದೆ. ನಾಮಗಳಿಲ್ಲದ ವ್ಯಕ್ತಿಗಳಿಲ್ಲ, ಜಗತ್ತಿನಲ್ಲಿ ಹೆಸರುಗಳಿಲ್ಲದ ವ್ಯಕ್ತಿಗಳನ್ನು ಗುರುತಿಸುವುದು ಕಷ್ಟ. ಹೆಸರಿಲ್ಲದ ಯಾವ ವಸ್ತು, ವ್ಯಕ್ತಿಯನ್ನು ಜಗತ್ತಿನಲ್ಲಿ ಕಾಣಲಾಗದು. ವ್ಯಕ್ತಿನಾಮಗಳಲ್ಲಿ ಸಾಮಾನ್ಯವಾಗಿ ನಿಜನಾಮ ಮತ್ತು ಉಪನಾಮಗಳೆಂಬ ಎರಡು ಬಗೆಯ ಅಂಶಗಳು ಸೇರಿಕೊಂಡಿವೆ. ಇದರಲ್ಲಿ ಉಪನಾಮಗಳ ಹಿಂದೆ

*Please cite this article as: ರಮ್ಯ. ಎನ್.ಆರ್.* (2023). ನಾಗತಿ ಹೆಸರಿನ ವ್ಯಕ್ತಿನಾಮಗಳು ಮತ್ತು ಸ್ಥಳನಾಮಗಳು: ಚಾರಿತ್ರಿಕ ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ. 4(4). ಪು. ಸಂ. 63–70.*

ಸ್ವಾರಸ್ಯಕರವಾದ ಇತಿಹಾಸವಿದೆ ಎಂದಿದ್ದಾರೆ. ಹಾಗೆಯೇ ಎಲ್ಲಾ ಸ್ಥಳನಾಮಗಳ ಹಿನ್ನಲೆಯಲ್ಲಿ ಕಥೆ ರೂಪದ ಐತಿಹ್ಯಗಳನ್ನು ವಿವರಿಸುವುದನ್ನು ಕಾಣಬಹುದು. ಕೆಲವು ಪ್ರಮುಖ ವ್ಯಕ್ತಿಗಳ ಹೆಸರನ್ನು ಊರಿಗೆ ಅಥವಾ ಹಳ್ಳಿಗೆ ಇಡಲಾಗುತ್ತಿತ್ತು.

ಸ್ತ್ರೀ–ಪುರುಷರ ಹೆಸರುಗಳ ಕೊನೆಯಲ್ಲಿ 'ನಾಗತಿ–ನಾಯಕ' ಎಂಬ ಪದಗಳನ್ನು ಕಾಣುತ್ತೇವೆ. ಜನರ ಗುಂಪನ್ನು ಮುನ್ನಡೆಸುವ (ನಾಯಕ–ನಾಗತಿ), ನಿರ್ದೇಶಿಸುವ ಆಜ್ಞಾಪಿಸುವ ಅಥವಾ ಮಾರ್ಗದರ್ಶನ ಮಾಡುವ ಮಹಿಳೆ, ಮಹಿಳಾ ನಾಯಕಿಯಾಗಿ ಗುರುತಿಸಿಕೊಂಡಿದ್ದಾಳೆ. ಸ್ತ್ರೀಯರ ಹೆಸರುಗಳಿಗೆ ಯಾವುದೇ ಜಾತಿ ವಾಚಕಗಳಾಗಲೀ ವೃತ್ತಿ ವಾಚಕಗಳಾಗಲಿ ಸೇರುವುದಿಲ್ಲ ಎಂಬುದು ವಿಶೇಷ ಆದರೆ ಇಂದು ಈ ರೀತಿಯ ಸಾಧ್ಯತೆಗಳು ಬಳಕೆಯಲ್ಲಿವೆ' ಎಂದು ಹೇಳಿದ್ದಾರೆ.

ನಾಯಕ ಅರಸು ಮನೆತನದವರ ಹೆಂಡತಿಯರಿಗೆ(ರಾಣಿಯರಿಗೆ) ನಾಗತಿಯೆಂದು ವಿಶೇಷ ಗೌರವ ನಾಮದಿಂದ ಕರೆಯುತ್ತಿದ್ದರು. 'ನಾಗತಿ' ಎಂಬುದಕ್ಕೆ ಅಮ್ಮ ಎಂಬ ಸಂಬಂಧವಾಚಿ, ವಾರ್ಗಿಕ ಸೇರಿ 'ನಾಗತಿಯಮ್ಮ' ಎಂಬ ಹೆಸರಾಗಿ ಬಳಕೆಯಾಗಿದೆ. ಹೆಸರಿನ ಕೊನೆಗೆ ನಾಗತಿ ಎಂಬ ಪದ ಬಳಸಲಾಗಿದೆ. ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರು ಹೆಚ್ಚಾಗಿ ಮನೆಯ ಹೊರಾಂಗಣಕ್ಕಿಂತ ಮನೆಯ ಒಳಾಂಗಣ ಕಾರ್ಯಗಳಲ್ಲಿಯೇ ನಿರತರಾಗಿರುತ್ತಿದ್ದರು. ತಾನು ಮದುವೆಯಾದ ಪುರುಷನನ್ನು ಉಲ್ಲೇಖಿಸುವ ಮಹಿಳೆ, ಹೆಂಡತಿ, ರಾಣಿ ಆಡಳಿತಗಾರ್ತಿಯಾಗಿ ಅಥವಾ ರಾಜನ ಹೆಂಡತಿಯಾಗಿ ತನ್ನ ಪಾತ್ರವನ್ನು ನಿರ್ವಹಿಸುತ್ತಾಳೆ. ಕ್ರಿ.ಶ. 10ನೇ ಶತಮಾನದ ಪೂರ್ವದಲ್ಲಿ ನಾಯಕ ನಾಯಕಿಯ ಉಲ್ಲೇಖ ಸಿಗುತ್ತದೆ. ಗಂಗರು, ಚಾಲುಕ್ಯರು, ರಾಷ್ಟ್ರಕೂಟರ ಸೈನಿಕರಲ್ಲಿ ನಾಯಕನಿದ್ದು, ಬಹುಶಃ ಆಗಿನಿಂದಲೇ ನಾಯಕ ವೃತ್ತಿ ಮೂಲಕ ಗೌರವ ಸೂಚಕವಾಗಿ ಒಂದು ಜನಾಂಗಕ್ಕೆ ಹೆಸರು ಅಂಟಿಕೊಂಡಿದೆ. ನಾಯನಿ, ನಾಯಕಿತಿ, ನಾಗತಿ ಎಂಬ ಬೇಡ ನಾಯಕರ ಮಹಿಳೆಯರಿಗೆ ಕರೆಯಲಾಗಿದೆ. ಕನ್ನಡ ಶಾಸನಗಳಲ್ಲಿ ನಾಯಕಿತಿ–ನಾಗತಿಯರ ಉಲ್ಲೇಖ ವಿಫುಲವಾಗಿದೆ. ಉದಾ: ದೋಚವೆ ನಾಯಕಿತಿ, ಮಾರವ್ವೆ ನಾಯಕಿತಿ, ಹೊನವ್ವೆ ನಾಯಕಿತಿ ಇತ್ಯಾದಿ.

**ನಾಗತಿಯರ ಬಗ್ಗೆ ಬರೆದಿರುವ ಬರವಣಿಗೆಗಳು**

ಗಿರಿಜಾ ಟಿ. ಅವರು ದುರ್ಗದ ನಾಗತಿಯರು ಎಂಬ ಕೃತಿಯಲ್ಲಿ ಚಿತ್ರದುರ್ಗ ಪಾಳೆಯಗಾರರ 20ಕ್ಕೂ ಹೆಚ್ಚು ನಾಗತಿಯರ ಬಗ್ಗೆ ತಿಳಿಸಿದ್ದಾರೆ. ನಾಗತಿಯರು ದೇವಾಲಯ ನಿರ್ಮಾಣ, ದಾನದತ್ತಿ ನೀಡಿರುವಂತದ್ದು, ಶಾಸನಗಳನ್ನು ಕೆತ್ತಿಸಿರುವ ವಿಚಾರಗಳನ್ನು ಕಾಣಬಹುದು. ನಾಗತಿಯರು ಸತಿ ಸಹಗಮನ ಪದ್ಧತಿಗೆ ಒಳಗಾಗಿರುವಂತದ್ದು ಮತ್ತು ಶೈವ ಮತಕ್ಕೆ ಮತಾಂತರ ಗೊಂಡ ನಾಗತಿಯರನ್ನು ತಿಳಿಸಿದ್ದಾರೆ. ಆಡಳಿತ ಚುಕ್ಕಾಣಿ ಹಿಡಿದು. ದುರ್ಗವನ್ನು ರಕ್ಷಿಸಿದ ಗಂಡೋಬಳವ್ವ ನಾಗತಿಯನ್ನು ಕಾಣಬಹುದಾಗಿದೆ. ಈ ಕೃತಿಯಲ್ಲಿ ನಾಗತಿಯರಲ್ಲದೇ ಇತರೆ ಮಹಿಳೆಯ ಬಗ್ಗೆಯೂ ತಿಳಿಸಲಾಗಿದೆ.

ಡಿ.ಎನ್.ಯೋಗೀಶ್ವರಪ್ಪರವರು ***'ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು'*** ಎಂಬ ಕೃತಿಯಲ್ಲಿ ಚಿತ್ರದುರ್ಗ ಪಾಳೆಯಗಾರರು ಬಹುಪತ್ನಿತ್ವವನ್ನು ಅನುಸರಿಸುತ್ತಿದ್ದನ್ನು ಕಾಣಬಹುದಾಗಿದೆ. ನಾಗತಿಯರ ಸಂಖ್ಯೆಯನ್ನು ತಿಳಿಸಿದ್ದಾರೆ. ಪಾಳೆಯಗಾರರೊಂದಿಗೆ ಇರುವ ಸಂಬಂಧಗಳ ಬಗ್ಗೆ ಕಾಣಬಹುದಾಗಿದೆ.

ಎಂ.ದುರುಗಪ್ಪರವರು ***'ವಿಜಯನಗರೋತ್ತರ ಕಾಲೀನ ಬೇಡ ಜನಾಂಗ ಚಾರಿತ್ರಿಕ ಅಧ್ಯಯನ'*** ಎಂಬ ಕೃತಿಯಲ್ಲಿ ಪಾಳೆಯಗಾರರ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಅಂಶಗಳ ಬಗ್ಗೆ ತಿಳಿಸಿದ್ದಾರೆ. ರಾಣಿಯರು ಕೆರೆ, ಬಾವಿಗಳನ್ನು ಕಟ್ಟಿಸಿದರ ಬಗ್ಗೆ ಉಲ್ಲೇಖಿಸಿದ್ದಾರೆ.

ಎಮ್.ಎಸ್.ಪುಟ್ಟಣ್ಣರವರು ***'ಚಿತ್ರದುರ್ಗದ ಪಾಳೆಯಗಾರರು'*** ಈ ಕೃತಿಯಲ್ಲಿ ನಾಗತಿಯರು ಸತಿ ಸಹಗಮನ ಮಾಡುತ್ತಿದ್ದರು ಎಂಬುದರ ಉಲ್ಲೇಖವಿದೆ. ನಾಗತಿಯರು ಪಾಳೆಯಗಾರರ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ಬಗ್ಗೆ ತಿಳಿಸಿದ್ದಾರೆ. ಆಡಳಿತಕ್ಕೆ ಗಂಡೋಬಳವ್ವನಾಗತಿಯೇ ಪ್ರಮುಖವಾದವಳು. ಹಾಗೆಯೇ ಕನಕವ್ವ, ಕೆಂಚವ್ವ, ಹಟ್ಟಿ ಮಲ್ಲವ್ವನಾಗತಿ, ಹೊನ್ನವ್ವ ನಾಗತಿ, ತಿಮ್ಮವ್ವನಾಗತಿ, ಗೌರವ್ವನಾಗತಿಯರ ಬಗ್ಗೆ ಉಲ್ಲೇಖಿಸಿದ್ದಾರೆ. ನಾಗತಿ ಪದದ ಅರ್ಥವನ್ನು ಸಹ ಈ ಕೃತಿಯಲ್ಲಿ ತಿಳಿಸಿದ್ದಾರೆ.

ಶಿವಣ್ಣ ಬಿ., ***'ತರೀಕೆರೆ ಪಾಳೇಗಾರರ ಕಥೆ ವ್ಯಥೆ'*** ಎಂಬ ಲೇಖನದಲ್ಲಿ ರಾಣಿ ಯಶೋಧಮ್ಮ ನಾಗತಿಯ ಬಗ್ಗೆ ತಿಳಿಸಿದ್ದಾರೆ.

ವಿರೂಪಾಕ್ಷಿ ಪೂಜಾರಹಳ್ಳಿಯವರು ***'ವಾಲ್ಮೀಕಿ ಸಮುದಾಯದ ಪಾತ್ರ ಸ್ಮರಣಿಯರು'*** ಎಂಬ ಕೃತಿಯಲ್ಲಿ ರಾಣಿ ಯಶೋಧಮ್ಮ ನಾಗತಿಯ ಬಗ್ಗೆ ತಿಳಿಸಿದ್ದಾರೆ. ತಾರಿಹಳ್ಳಿ ಹನುಮಂತಪ್ಪರವರು ನಾಯಕರ ಮಹಾ ಸಂಸ್ಥಾನ ಸುರಪುರ ಎಂಬ ಕೃತಿಯಲ್ಲಿ ಸುರಪುರದ ರಾಣಿಯರಾದ ರಾಣಿಕಾಂತಮ್ಮ ರಾಣಿ ಈಶ್ವರಮ್ಮ, ರಾಣಿರಂಗಮ್ಮ ಅವರು ಆಡಳಿತ ಅವರ ಹೆಸರಿನ ಊರುಗಳನ್ನು ಕಾಣಬಹುದು. ಕೆರೆ, ನಿರ್ಮಾಣದಲ್ಲಿ ಸಾಧನೆ ಮಾಡಿದ್ದಾರೆ.

ಶರಣ ಬಸಪ್ಪ ಕೋಲ್ಕಾರ್ ಅವರು ***'ಕನಕಗಿರಿ ರಾಣಿಯರು'*** ಎಂಬ ಲೇಖನದಲ್ಲಿ ರಾಣಿ ಲಕ್ಷ್ಮಿನಾಗತಿಯ ಬಗ್ಗೆ ದೊರೆಗಳಿಗೆ ತಮ್ಮ ಹೆಸರಿನ ಜೊತೆ ಆಕೆಯ ಹೆಸರನ್ನು ಸೇರಿಸಿಕೊಂಡಿರುವುದು ವಿಧಿತವಾಗುತ್ತದೆ ಎಂದು ವಿವರಿಸಿದ್ದಾರೆ. ಇನ್ನು ಇತರೆ ರಾಣಿಯರ ಉಲ್ಲೇಖವನ್ನು ಕಾಣಬಹುದಾಗಿದೆ.

ಕುಂ.ಬಾ ಸದಾಶಿವಪ್ಪರವರು **'ಹರಪನಹಳ್ಳಿ ಪಾಳೆಯಗಾರರ ಇತಿಹಾಸ ದರ್ಶನ'** ಕೃತಿಯಲ್ಲಿ ರಾಣಿ ಹರಿಯಮ್ಮಾಜಿ, ನಾಗತಿ ಹೊನ್ನನಾಗತಿ, ಸೋಮಮ್ಮಾಜಿ, ನಾಗತಿಯರ ಬಗ್ಗೆ ಅವರ ಸಾಧನೆಗಳ ಬಗ್ಗೆ ತಿಳಿಸಿದ್ದಾರೆ.

ಸಿ.ಆರ್.ಶ್ಯಾಮಲರವರು ***'ಪೂರ್ವ ಕರ್ನಾಟಕದ ಪಾಳೆಯಗಾರರು: ಒಂದು ಅಧ್ಯಯನ'*** ಎಂಬ ಕೃತಿಯಲ್ಲಿ ಪಾಳೆಯಗಾರರ ಕಾಲದ ನಾಗತಿಯ ಬಗ್ಗೆ ಸ್ತ್ರೀ ಸೂಚಕ ಸ್ಥಳನಾಮಗಳ ಬಗ್ಗೆ ತಿಳಿಸಿದ್ದಾರೆ.

***'ಜರಿಮಲೆ ಪಾಳೆಯಗಾರರ ಒಂದು ಅಧ್ಯಯನ'*** ಎಂಬ ಎಂ.ಫಿಲ್ ನಿಬಂಧದಲ್ಲಿ ಲಿಂಗಮ್ಮ ನಾಗತಿಯ ಬಗ್ಗೆ ತಿಳಿಸಲಾಗಿದೆ. ***'ನಿಡುಗಲ್ಲು ಶಾಸನಗಳ ಸಾಮಾಜಿಕ ಮತ್ತು ಧಾರ್ಮಿಕ ಅಧ್ಯಯನ'*** ಎಂ.ಫಿಲ್ ನಿಬಂಧದಲ್ಲಿ ಹೊಟ್ಟೆಣ್ಣ ನಾಯಕನ 5 ಜನ ನಾಗತಿಯರಿದ್ದರೆಂದು ತಿಳಿಸುತ್ತದೆ. ಹಾಗೆಯೇ ತಿಮ್ಮಣ್ಣ ನಾಯಕನಿಗೆ 9 ಜನ ನಾಗತಿಯರನ್ನು ಕಾಣಬಹುದಾಗಿದೆ. ಅಮರೇಶ ಯತಗಲ್, ಬಿ.ರಾಜಶೇಖರಪ್ಪ, ಲಕ್ಷ್ಮಣ್ ತೆಲಗಾವಿ, ಅಬ್ದುಲ್ ಸತ್ತಾರ್, ಸುಮತೀಂದ್ರ ನಾಡಿಗ್ ಇನ್ನು ಮುಂತಾದವರು ತಮ್ಮ ಕೃತಿಗಳಲ್ಲಿ ನಾಗತಿಯರ ಬಗೆಗೆ ತಿಳಿಸಿದ್ದಾರೆ.

**ನಾಗತಿ ಪದದ ಶಬ್ದದ ಉತ್ಪತ್ತಿ, ಅರ್ಥ, ವಿವರಣೆ**

ಪ್ರಾಚೀನ ಕಾಲದಲ್ಲಿ ನಾಗತಿ ಎಂಬ ಪದವು ಪುರುಷ ವ್ಯಕ್ತಿನಾಮವಾಗಿ ಬಳಕೆಯಾಗಿರುವುದನ್ನು ಕಾಣಬಹುದಾಗಿದೆ. ನಾಗತಿ ಎಂಬುದು 'ರಾಜ', 'ಗೌಡ' ಅರಸ ಎಂಬ ಪುಲ್ಲಿಂಗ ಸೂಚಕ ಹಾಗೂ ವೃತ್ತಿವಾಚಿ ಪದಗಳಿಗೆ ಸಂವಾದಿಯಾಗಿ ಅವರ ಹೆಂಡತಿಯರಿಗೆ 'ರಾಣಿ', 'ಗೌಡತಿ', 'ಅರಸಿ' ಎಂಬ ಪದಗಳು ಅಂಟುವುದು ಸಹಜ ಅದೇ ರೀತಿ 'ನಾಗತಿ' ಎಂಬುದು ನಾಯಕ ಎಂಬುದರ ಸ್ತ್ರೀಲಿಂಗ ರೂಪವಾಗಿ ಪಾಳೆಯಗಾರರ ಹೆಂಡತಿಯರ ಹೆಸರುಗಳಿಗೆ ಅಂಟಿಕೊಂಡಿರುವುದುಂಟು 'ನಾಗತಿ' ಎಂಬುದು ನಾಯಕಿತಿ, ನಾಯಕಿತಿನಿ, ನಾಯಕಿನಿ, ನಾಗತಿ ಎಂಬ ರೂಪಗಳಲ್ಲಿ ಬಳಕೆಯಾಗಿದೆ. ಮಧ್ಯಯುಗೀನ ಕಾಲದ ಪಾಳೆಯಗಾರರ ಹೆಂಡತಿಯರಿಗೆ 'ನಾಗತಿ' ಎಂದು ಕರೆಯಲಾಗುತ್ತಿತ್ತು ಹಾಗೂ ಅವರ ಹೆಸರಿನ ಕೊನೆಯಲ್ಲಿ ನಾಗತಿ ಎಂಬ ಪದ ಇರುವುದನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ನಾಗತಿ ಆಕೃತಿಮಾದ ನಿಷ್ಪತ್ತಿಯನ್ನು ನೋಡಬಹುದು. ಪಾಳೆಯಗಾರ ಪಟ್ಟದರಸಿಯರನ್ನು ನಾಗತಿ ಎಂದು ಪ್ರತಿಷ್ಠಿತ ಹೆಸರಿನಿಂದ ಕರೆಯುತ್ತಿದ್ದರು. ಜೊತೆಗೆ ಅಮ್ಮ, ಅಮ್ಮ, ಆಕೃತಿಮಾಗಳು ಸ್ತ್ರೀನಾಮಗಳಿಗೆ ಅಂಟುವ ರೀತಿ ಅದರ ವ್ಯತ್ಯಾಸಗಳನ್ನು ಕಾಣಬಹುದು. ಅಮ್ಮ ಮತ್ತು ಅವ್ವ ಎಂಬುದು ಹೆಸರಿನ ಕೊನೆಗೆ ಮ್ಮ+ವ್ವ ಎಂಬ ರೂಪದಿಂದ ಸೇರಿಕೊಳ್ಳುತ್ತದೆ. ಸ್ತ್ರೀವಾಚಿ ವ್ಯಕ್ತಿನಾಮಗಳಲ್ಲಿ ಈ ಬಂಧು ವಾಚಕ ಪದಗಳ ಬಳಕೆಯಾಗುತ್ತವೆ. ಜೊತೆಗೆ ನಾಗತಿ ಎಂಬ ಪದ ಸೇರಿಕೊಂಡಿದೆ. ಉದಾ: ರಾಣಿ ಈಶ್ವರಮ್ಮ, ರಾಣಿ ಕುಪ್ಪಮ್ಮ, ರಾಣಿಗೌರಮ್ಮ ಕೆಂಚವ್ವ, ಹನುಮವ್ವ, ಮಲ್ಲವ್ವನಾಗತಿ, ಓಬಳಮ್ಮನಾಗತಿ.

**ನಾಗತಿ ಪದದ ರೂಪಾಂತರ ವೈವಿಧ್ಯಗಳು**

ಸ್ತ್ರೀ ನಾಮಗಳಿಗೆ (ಅಮ್ಮ+ಅವ್ವ+ನಾಗತಿ) ಎಂದೂ ರೂಪಾಂತರವಾಗುತ್ತಿದೆ ಎಂದು ತಿಳಿದು ಬರುತ್ತದೆ. ಆದ್ದರಿಂದ 'ನಾಗತಿ' ಎಂಬ ಪದ ಪಾಳೆಯಗಾರ ನಾಯಕನ ಹೆಂಡತಿಯರ ಹೆಸರಿಗೆ ಈ ಪದ ಅಂಟಿಕೊಂಡಿದೆ ಎಂದು, ಇದು ಗೌರವ ಸೂಚಕ ಪದವಾಗಿ ಪ್ರಸ್ತುತ ಗುರುತಿಸಲಾಗಿದೆ. ಇಂತಹ ಹೆಸರುಗಳು ಸಮಾಜದಲ್ಲಿ ವ್ಯಕ್ತಿಯ ಇರುವಿಕೆಯನ್ನು ಗುರುತಿಸಲು ಪ್ರಧಾನ ಸಾಧನವಾಗಿದೆ.

ಕೆಂಚವ್ವ–> ಸಾಮಾನ್ಯವರ್ಗ

ರಂಗಮ್ಮ–> ಮಧ್ಯಮವರ್ಗ

ಓಬಳಮ್ಮನಾಗತಿ–>ಪ್ರತಿಷ್ಠಿತವರ್ಗದ ಹೆಸರುಗಳಾಗಿ ಬಳಕೆಯಲ್ಲಿವೆ.

ನಾಗತಿ ಎಂಬ ಪದದೊಂದಿಗೆ ಸೇರಿರುವ ಕೆರೆಗಳನ್ನು, ಹಳ್ಳಿಗಳನ್ನು ಪ್ರಸ್ತುತ ಕಾಣಬಹುದಾಗಿದೆ.

**ನಾಗತಿ ಎಂಬ ಪದಗಳಿಂದ ಕಂಡುಬರುವ ಸ್ತ್ರೀ ನಾಮಗಳು**

**ಅಮ್ಮವ್ವ ನಾಗತಿ ಹಾಗೂ ಹನುಮವ್ವನಾಗತಿ:** ಸುರಪುರದ ನಾಯಕ ಸಂಸ್ಥಾನದಲ್ಲಿ ಬರುವ ರಾಣಿಯರು ಕೇಂದ್ರಸ್ಥಾನಕ್ಕೆ ಏರಿ ದೇವಪುರದ ಗಡಿಯಲ್ಲಿ ಆಡಳಿತ ಮಾಡುತ್ತಿದ್ದ ಸುರಪುರ ನಾಯಕ ಸಂಸ್ಥಾನದ ಅರಸನಾದ ಗಡ್ಡಿ ಪಿಡ್ಡ ನಾಯಕನ ಹೆಂಡತಿಯರಾಗಿದ್ದರು.

**ರಾಣಿ ಲಕ್ಷ್ಮೀನಾಗತಿ:** ಕನಕಗಿರಿಯ 4ನೇ ದೊರೆ ಒಂದನೇಯ ಕನಕಪ್ಪ ಉಡಚನಾಯಕನ ಪತ್ನಿ, ಇವರು ಕೆರೆಯನ್ನು ಕಟ್ಟಿಸಿರುವರು. ಈ ಕೆರೆಯ ಬಗ್ಗೆ ಐತಿಹ್ಯವನ್ನು ಕಾಣಬಹುದು.

**ಹೊನ್ನವ್ವ ನಾಗತಿ:** ಚಿತ್ರದುರ್ಗ ಪಾಳೆಯಗಾರ ಮತ್ತಿ ತಿಮ್ಮಣ್ಣ ನಾಯಕ ಮಗಳಾದ ಹೊನ್ನವ್ವ ನಾಗತಿಯನ್ನು ಹರಪನಹಳ್ಳಿ ಪಾಳೆಯಗಾರನಾದ ದಾದೇನಾಯಕನಿಗೆ ಕೊಟ್ಟು ವಿವಾಹ ಮಾಡಲಾಗುತ್ತದೆ. ಒಂದು ದಿನ ಉಚ್ಚಂಗಿ ಬೆಟ್ಟದ ಮೇಲಿಂದ ಆಕಸ್ಮಿಕವಾಗಿ ಕಾಲು ಜರಿ ಹೊಂಡಕ್ಕೆ ಬಿದ್ದಳು ಆ ಹೊಂಡಕ್ಕೆ 'ಹೊನ್ನೆ ಮಡೆವು' ಅಥವಾ 'ಹೊನ್ನಿಜರಿ' ಯೆಂದು ಹೆಸರನ್ನು ಕರೆದರು.

**ಬಾಗುಳಿ ಹರಿಯಮ್ಮಾಜಿ ನಾಗತಿ:** ಹರಪನಹಳ್ಳಿ ಪಾಳೆಯಗಾರ ಬಸವಂತ ನಾಯಕನ ಮಡದಿ 5 ವರ್ಷಗಳ ಕಾಲ ಆಳ್ವಿಕೆ ಮಾಡಿದಳು. ಹೆಚ್ಚು ಧಾರ್ಮಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದಳು. 'ಉದ್ಗಟ್ಟೆ' ಎಂಬ ಸೊಂದು ಮಠವನ್ನು ಕಟ್ಟಿಸಿ ಅದಕ್ಕೆ ದಾನದತ್ತಿಗಳನ್ನು ನೀಡಿದಳು.

**ಸೋಮಮ್ಮಾಜಿ ನಾಗತಿ:** ಹರಪನಹಳ್ಳಿ ಪಾಳೆಯಗಾರ ಒಂದನೆ ಸೋಮಶೇಖರನ ಪಟ್ಟದರಾಣಿ ಪತಿಯ ಮರಣದ ನಂತರ ತಾನೇ ರಾಜ್ಯಾಡಳಿತವಹಿಸಿಕೊಂಡಳು. ಹಂಪಿ ವಿರೂಪಾಕ್ಷಿ ದೇವರಿಗೆ ಜೋಡು ರಥಗಳನ್ನು ಮಾಡಿಸಿಕೊಟ್ಟಳು.

**ಕನಕವ್ವನಾಗತಿ:** ಚಿತ್ರದುರ್ಗ ಪಾಳೆಯಗಾರನಾದ ಗಡ್ಡದ ಓಬಣ್ಣ ನಾಯಕನ ಪತ್ನಿ ಕನಕವ್ವನಾಗತಿ ಏಕನಾಥೇಶ್ವರಿ ದೇವತೆಯ ಭಕ್ತೆ, ಏಕನಾಥೇಶ್ವರಿ ದೇವತೆಯ ಮುಂದಿನ ದೀಪದ ಕಂಭವನ್ನು ನಿಲ್ಲಿಸುವಾಗ ಅದು ನಿಲ್ಲಲಿಲ್ಲವೆಂದು ಅದಕ್ಕೆ ತುಂಬು ಗರ್ಭಿಣಿಯಾದ ಕನಕವ್ವ ನಾಗತಿ ಬಲಿಯಾದ ಮೇಲೆ ಅಂದು ನಿಂತಿತೆಂದೂ ಕಂಬದ ಮೇಲಿರುವ ಚಿತ್ರ ಆಕೆಯದೆಂದೂ ಹೇಳುತ್ತಾರೆ.

**ಓಬಳಮ್ಮ ನಾಗತಿ:** ಚಿತ್ರದುರ್ಗ ಪಾಳೆಯಗಾರನಾದ ಹಿರಿಯ ಮದಕರಿ ನಾಯಕನ ಪಟ್ಟದ ರಾಣಿ, ಇವಳು 2 ವರ್ಷ ಆಡಳಿತ ನಡೆಸಿದಳು. ಈಕೆ, ಧೈರ್ಯವಂತಳೂ, ಶೂರಳೂ, ಚಾಣಾಕ್ಷಳೂ, ಅಲ್ಲದೆ ಯುದ್ಧ ನಿಪುಣಳೂ ಆಗಿದ್ದಳು. ರಾಯದುರ್ಗದವರನ್ನು ಯುದ್ಧದಲ್ಲಿ ಸೋಲಿಸಿ ಓಡಿಸಿದಳು.

**ಯಶೋಧಮ್ಮ ನಾಗತಿ:** ತರೀಕೆರೆ ಪಾಳೇಗಾರ, ಸರ್ಜಾ ಹನುಮಪ್ಪ ನಾಯಕನ 3ನೇ ಹೆಂಡತಿಯಾದ ಯಶೋಧಮ್ಮನಾಗತಿಯು ತಮ್ಮೆಲ್ಲಾ ಆಸ್ತಿಯನ್ನು ಚಿತ್ರದುರ್ಗ ಬೃಹನ್ಮಠದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳಿಗೆ ಒಪ್ಪಿಸಿ 1986ರಲ್ಲಿ ಕೊನೆ ಉಸಿರೆಳೆದರು.

**ಸಾರಮ್ಮ ನಾಗತಿ:** ಈಕೆಯು ಹತ್ತಿ ಬೆಳಗಲು ಪಾಳೆಯಗಾರನ ಹೆಂಡತಿ, ಪತಿಯು ಅಕಾಲಿಕವಾಗಿ ಮೃತನಾದಾಗ 15 ಗ್ರಾಮಗಳ ಆಳ್ವಿಕೆ ನಡೆಸಿದಳು.

**ಮಲ್ಲವ್ವನಾಗತಿ:** ಚಿತ್ರದುರ್ಗ ಪಾಳೆಯಗಾರರಾದ ಚಿಕ್ಕಣ್ಣನಾಯಕನ ಹೆಂಡತಿ, ಇವಳು ಊರಿನಿಂದ ಹೊರಗೆ ಇದ್ದು ಮಠದ ಜಂಗಮರ ಗುರುಗಳ ಸೇವೆಯನ್ನು ಮಾಡಿಕೊಂಡಿದ್ದಳು. ಹೀಗೆ ಇನ್ನೂ ಮುಂತಾದ ಸ್ತ್ರೀನಾಮಗಳಲ್ಲಿ ನಾಗತಿಯರ ಹೆಸರನ್ನು ಕಾಣಬಹುದಾಗಿದೆ.

**ನಾಗತಿ ಎಂಬ ಪದಗಳಿಂದ ಕಂಡುಬರುವ ಹಳ್ಳಿಗಳು**

**ಓಬ್ಬವ್ವನಾಗತಿಹಳ್ಳಿ**

ಚಿತ್ರದುರ್ಗ ತಾಲ್ಲೂಕು ಹಿರೇಗುಂಟನೂರು ಹೋಬಳಿ ಆಲಗಟ್ಟಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕಂದಾಯ ಗ್ರಾಮ, ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ 28 ಕಿ.ಮೀ ದೂರದಲ್ಲಿದೆ. ಪಾಳೆಯಗಾರರ ಕಾಲದ ನಾಗತಿಯ ಹೆಸರನ್ನು ಇಡಲಾಗಿದ್ದು. ಚಿತ್ರದುರ್ಗ ಭರಮಣ್ಣ ನಾಯಕರ ಕಾಲದ

ಆಳ್ವಿಕೆಯಲ್ಲಿ ಈ ಗ್ರಾಮವು ಪಟ್ಟಡಿ ಗ್ರಾಮವಾಗಿತ್ತು. ಚಿತ್ರದುರ್ಗದ ಸಂಸ್ಥಾನವನ್ನು ಆಳಿದ ಚಿಕ್ಕಣ್ಣ ನಾಯಕರ ಕಾಲದಲ್ಲಿ ಕ್ರಿ.ಶ. 1681 ಓಬವ್ವನಾಗತಿಯ ಹೆಸರಿನಲ್ಲಿ ಈ ಗ್ರಾಮ ನಿರ್ಮಾಣಗೊಂಡಿರುವ ಪ್ರತೀತಿ ಇದೆ.

**ಬೊಮ್ಮವ್ವನಾಗತಿಹಳ್ಳಿ**

ಚಿತ್ರದುರ್ಗ ತಾಲ್ಲೂಕು ಹಿರೇಗುಂಟನೂರು ಹೋಬಳಿಯಿಂದ 22 ಕಿ.ಮೀ ದೂರದಲ್ಲಿದೆ, ಪಾಳೆಯಗಾರರ ಕುಲದ ನಾಗತಿ ಬೊಮ್ಮವ್ವನ ಹೆಸರನ್ನು ಇಡಲಾಗಿದೆ. ಭರಮಣ್ಣನಾಯಕನ ಕಾಲದ ಸಂದರ್ಭದಲ್ಲಿ ಬೊಮ್ಮವ್ವ ನಾಗತಿಹಳ್ಳಿ ಒಂದು ಪಟ್ಟಡಿ ಗ್ರಾಮವಾಗಿತ್ತೆಂದು ತಿಳಿಯುತ್ತದೆ.

**ಲಿಂಗವ್ವನಾಗತಿಹಳ್ಳಿ**

ಚಿತ್ರದುರ್ಗ ತಾಲ್ಲೂಕು 26 ಕಿ.ಮೀ ಚಿ.ಪಾಳೆಯಗಾರರು ತಮ್ಮ ಮಡದಿಯರ ಹೆಸರುಗಳನ್ನು ಪ್ರೀತಿ ಮತ್ತು ಸಂತೋಷಕ್ಕಾಗಿ ಹಲವಾರು ಹಳ್ಳಿಗಳಿಗೆ ಇಟ್ಟಿದ್ದಾರೆ. ಹಾಗೆಯೇ ಕಲಾ ಪ್ರೇಮ, ಜನಪ್ರಿಯತೆ, ಸೇವಾಮನೋಭಾವ, ಆಡಳಿತ ಕೌಶಲ್ಯ ಮುಂತಾದ ಗುಣಗಳನ್ನು ಹೊಂದಿದ ಮಹಿಳೆಯರಿಗೆ ಹಳ್ಳಿಯನ್ನು ದಾನ ನೀಡಿದ, ಇಲ್ಲವೆ ಅವರ ಹೆಸರನ್ನು ಹಳ್ಳಿಗಳಿಗೆ ಇಡುವ ಸಂಪ್ರದಾಯವಿದ್ದು, ಈ ಹಿನ್ನೆಲೆಯಲ್ಲಿ ಪಾಳೆಯಗಾರರ ಕಾಲದ ನಾಗತಿಯರ ಹೆಸರಿನಲ್ಲಿ ಇಂತಹ ಹೆಸರುಗಳಿವೆ. ಚಿತ್ರದುರ್ಗದ ಪಾಳೆಯಗಾರರ ವಂಶಸ್ಥನಾದ ಮದಕರಿ ನಾಯಕನ ಅನುಚರರೊಬ್ಬರು ಈ ಊರಿನಲ್ಲಿ ನೆಲೆಸಿದ್ದರು. ಆತನ ಪತ್ನಿಯೇ ಲಿಂಗವ್ವನಾಗತಿ, ಆ ಕಾರಣವಾಗಿ ಲಿಂಗವ್ವ ನಾಗ್ತಿಹಳ್ಳಿ ಎಂಬ ಹೆಸರು ಬಂದಿದೆ.

**ವೀರವ್ವ ನಾಗತಿಹಳ್ಳಿ**

ಹೊಸದುರ್ಗ ತಾಲ್ಲೂಕು ಕೇಂದ್ರದಿಂದ 18 ಕಿ.ಮೀ ದೂರದಲ್ಲಿದೆ. ನಾಯಕನ ಹೆಂಡತಿ ಒಡತಿ, ವೀರವ್ವನಾಯ್ಕಿತಿಯಹಳ್ಳಿ, ವೀರವ್ವ ನಾಯ್ಕಿತೀಹಳ್ಳಿ, ವೀರವ್ವನಾಗತಿಹಳ್ಳಿ ಆಗಿದೆ. ವೀರವ್ವ ಸ್ತ್ರೀ ವಾಚಕ, ಪಾಳೆಗಾರನೊಬ್ಬನ ಮಡದಿಯ ಜನ್ಮಸ್ಥಳವೆಂದೂ ಆಕೆಯ ನೆನಪಿನ ಸ್ಥಳವೆಂದು ಜನರು ಹೇಳುತ್ತಾರೆ.

**ನಾಗತಿಹಳ್ಳಿ**

ಹೊಸದುರ್ಗ ತಾಲ್ಲೂಕು ಈ ಗ್ರಾಮವು ಆರಂಭದಲ್ಲಿ ನಂದೀಪುರ ಎಂಬ ಹೆಸರಿನಿಂದ ಕರೆಯುತ್ತಿದರು. ಏಕೆಂದರೆ ನಂದೀಶ್ವರ ದೇವಾಲಯವಿದ್ದುದರಿಂದ ನಂತರ ಅಲ್ಲಿ ಜನರು ಏಳಿಗೆ ಹೊಂದದೆ ಇದ್ದದರಿಂದ ಅಲ್ಲಿರುವ ಸ್ವಲ್ಪದೂರಕ್ಕೆ ಬಂದು ನೆಲೆಸಿದರು ಅಲ್ಲಿ ನಂದಿಬಸವಣ್ಣನ ದೇವಾಲಯದ ಸರ್ಪ ಕಾವಲು ಇರುವುದರಿಂದ ನಂದಿಪುರ ಎಂಬ ಹೆಸರುವಾಸಿ ನಾಗತಿಹಳ್ಳಿ ಎಂಬ ಹೆಸರು ಬರಲು ಕಾರಣವಾಯಿತು ಎಂಬ ಐತಿಹ್ಯವಿದೆ.

**ನಾಗತಿಹಳ್ಳಿ**

ಹೊಸದುರ್ಗ ತಾಲ್ಲೂಕು ಮತ್ತೋಡು ಹೋಬಳಿ 25 ಕಿ.ಮೀ ಪಾಳೇಗಾರನ ಮಡದಿ ನಾಯಕಿತ್ತಿಯ ನೆಲೆ ಅಥವಾ ನಾಯಕಿತ್ತಿಯ ನೆನಪಿನ ಸ್ಥಳನಾಮ ಎಂದು ಹೇಳಬಹುದು. ಪ್ರಾಚೀನ ಹೆಸರು ನಾಗತಿಹಳ್ಳಿ ಎಂದಿದ್ದರೂ ಜನರು ವ್ಯವಹಾರಕ್ಕಾಗಿ ಚಳ್ಳಕೆರೆ ಎಂದು ಕರೆಯುವುದುಂಟು.

**ಕಲ್ಲವ್ವ ನಾಗತಿಹಳ್ಳಿ**

ಹೊಳಲ್ಕೆರೆ ತಾಲ್ಲೂಕು ಗ್ರಾಮದ ಪ್ರಾಚೀನ ಹೆಸರು ನಾಗತಿಹಳ್ಳಿ ಪಾಳೇಯಗಾರರ ಆಳ್ವಿಕೆಯ ಕಾಲದ ಪ್ರಸಿದ್ಧ ನಾಯಕನಾದ ಬಿಚ್ಚುಗತ್ತಿ ಭರಮಣ್ಣ ನಾಯಕನು ತನ್ನಿಬ್ಬರು ಹೆಂಡತಿಯರಾದ ಕಲ್ಲವ್ವ ಮತ್ತು ರಂಗವ್ವರಿಗೆ ತಲಾಗೊಬ್ಬೊಬ್ಬರಿಗೆ ಒಂದೊಂದು ಹಳ್ಳಿಯನ್ನು ಉಡುಗೊರೆಯಾಗಿ ನೀಡಿದನು. ಕಲ್ಲವ್ವನಿಗೆ ನಾಗತಿ ಹಳ್ಳಿಯನ್ನು ಉಡುಗೊರೆಯಾಗಿ ನೀಡಿರುವುದರ ಐತಿಹ್ಯದ ಮೇರೆಗೆ ಕಲ್ಲವ್ವ ನಾಗತಿಹಳ್ಳಿ ಎನ್ನುವ ಹೆಸರು ಬಂದಿದೆ.

**ಚನ್ನಮ್ಮನಾಗತಿಹಳ್ಳಿ**

ಚಿತ್ರದುರ್ಗ ತಾಲ್ಲೂಕು 23 ಕಿ.ಮೀ ಚನ್ನಮ್ಮ ಚಿತ್ರದುರ್ಗದ ಪಾಳೆಯಗಾರರ ಸಂಬಂಧಿಯಾಗಿದ್ದು ಈಕೆ ಊರಿನ ಅಭಿವೃದ್ಧಿಗಾಗಿ ಒಂದು ಕೆರೆಯನ್ನು ಕಟ್ಟಿಸಿ ಕೆರೆಯ ಪಕ್ಕದಲ್ಲಿ ನಾಗರಕಲ್ಲುಗಳನ್ನು ಪ್ರತಿಷ್ಠಾಪಿಸಿದ್ದರಿಂದ ಚನ್ನಮ್ಮ ನಾಗತಿಹಳ್ಳಿ ಎಂದು ಹೆಸರಾಯಿತು ಎಂಬ ಐತಿಹ್ಯವಿದೆ. ಪಾಳೆಯಗಾರರ ಪರಂಪರೆಯಲ್ಲಿ ಬರುವ ಚೆನ್ನಮ್ಮನಾಗತಿ ಎಂಬುವಳ ಗೌರವಾರ್ಥ ಊರಿಗೆ ಈ ಹೆಸರು ಕರೆದಿರುವುದಾಗಿದೆ.

**ವೀರವ್ವನಾಗತಿಹಳ್ಳಿ**

ಹಿರಿಯೂರು ತಾಲ್ಲೂಕು ಕೇಂದ್ರದಿಂದ 25 ಕಿ.ಮೀ ದೂರದಲ್ಲಿದೆ, ಚಿತ್ರದುರ್ಗದ ಪಾಳೆಯಗಾರ ಚಿಕ್ಕಣ್ಣ ನಾಯಕರ ಪತ್ನಿ ವೀರವ್ವ ನಾಗತಿಯ ಹೆಸರಿನಲ್ಲಾದ ಈ ಗ್ರಾಮ ಬೇಚರಾಕ್ ಗ್ರಾಮವಾಗಿದ್ದು ಹಿಂದೆ ಇದ್ದ ಜನವಸತಿ ಸ್ಥಳದ ಬದಿಯಲ್ಲೇ ಇನ್ನೊಂದು ಊರಾಯಿತು. ಈ ಸ್ಥಳವನ್ನು ಹೊಸಹಳ್ಳಿ ಎಂಬ ಹೆಸರಿನಿಂದ ಕರೆಯಲಾಗಿದೆ.

**ಚಿಕ್ಕವ್ವ ನಾಗ್ತಿ ಹಳ್ಳಿ**

ದಾವಣಗೆರೆ, ಜಗಳೂರು ಮಾರ್ಗದಲ್ಲಿರುವ ಈ ಗ್ರಾಮಕ್ಕೆ ಪಾಳೆಯಗಾರರ ನಾಗತಿಯೊಬ್ಬಳ ಹೆಸರಿಟ್ಟಿದ್ದರೂ ಐತಿಹಾಸಿಕ ಸ್ಥಳವಲ್ಲ.

**ಯರ‍್ರವ್ವ ನಾಗತಿಹಳ್ಳಿ:**

ಮಾಯಕೊಂಡ ಹೋಬಳಿಗೆ, ಗೋಪ್ಪಾಳು ಪಂಚಾಯಿತಿಗೆ ಸೇರಿದ ಗ್ರಾಮ ಉಪ್ಪಾರರು, ನಾಯಕರು ವಿಶೇಷವಾಗಿದ್ದಾರೆ. ಹನುಮಂತ ದೇವರ ಉತ್ಸವ ನಡೆಯುತ್ತೆ.

ಹೀಗೆ ಇನ್ನು ಮುಂತಾದ ಹಳ್ಳಿಗಳಿಗೆ ನಾಗತಿ ಎಂಬ ಪದ ಸೇರಿ ಹಳ್ಳಿಗಳಾಗಿರುವುದನ್ನು ಕಾಣಬಹುದಾಗಿದೆ. ಮುಖ್ಯವಾಗಿ ನಾಗತಿ ಎಂಬ ಪದಗಳಿಂದ ಕಂಡುವ ಈ ಹಳ್ಳಿಗಳು ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಹಾಗೆಯೇ ಪಾಳೆಯಗಾರರ ವಂಶಸ್ಥರ ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯವನ್ನು ನೀಡಿದರಿಂದ ಕೆರೆಗಳನ್ನು ದೇವಾಲಯಗಳನ್ನು ನಿರ್ಮಿಸಿದ್ದಲ್ಲದೆ ದಾನದತ್ತಿ ನೀಡಿ. ಸಾರ್ವಜನಿಕ ಕೆಲಸದಲ್ಲಿ ತೊಡಗಿರುವುದರಿಂದ ತಮ್ಮ ರಾಣಿಯ ಹೆಸರಿನಲ್ಲಿ ಅನೇಕ ಗ್ರಾಮಗಳಿಗೆ ಹೆಸರನ್ನು ಇಟ್ಟರು ಎಂದು ಹೇಳಬಹುದು. ಆದರೆ ಪ್ರಸ್ತುತ ದಿನಗಳಲ್ಲಿ ಈ ನಾಗತಿ ಎಂಬ ಪದ ಬಳಕೆ ಕಡಿಮೆಯಾಗಿದೆ.

**ಉಪಸಂಹಾರ**

ಮನುಷ್ಯ ನಾಗರಿಕತೆಯೆಡೆಗೆ ಸಾಗುತ್ತಿದ್ದಂತೆ ಪ್ರಾಚೀನ ವ್ಯಕ್ತಿನಾಮಗಳು ಕಣ್ಮರೆಯಾಗುತ್ತಿವೆಯೆಂದು. ಹಾಗಾಗಿ ನಮ್ಮಿಂದ ದೂರಾಗುತ್ತಿರುವ ಹೆಸರುಗಳನ್ನು ಒಂದೆಡೆ ಸಂಗ್ರಹಿಸುವ ವಿಶ್ಲೇಷಿಸುವ ಅವುಗಳ ಮೂಲಕ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವ ಕೆಲಸವಾಗಬೇಕಾಗಿದೆ. ವ್ಯಕ್ತಿ ನಾಮಗಳು ಕೇವಲ ಅಂಕಿತ ನಾಮಗಳಾಗಿ ಮಾತ್ರ ಉಳಿದಿಲ್ಲ. ಅವು ತನ್ನೊಳಗೆ ಸಮುದಾಯಗಳ ಆಚಾರ–ವಿಚಾರ, ರೂಢಿ, ಸಂಪ್ರದಾಯ ಜೀವನ ಪದ್ಧತಿಯನ್ನು ಒಳಗೊಂಡಿರುತ್ತವೆ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಅಸ್ಮಿತೆಯನ್ನು ಗುರುತಿಸಿಕೊಳ್ಳಲು ಹೆಸರುಗಳನ್ನು ಪ್ರಮುಖವಾಗಿ ಬಳಸಿಕೊಳ್ಳುತ್ತಾರೆ. ಪಾಳೆಯಗಾರರ ಮಹಿಳೆಯರ ಹೆಸರುಗಳನ್ನು ಹಳ್ಳಿಗಳಿಗೆ, ಕೆರೆಗಳಿಗೆ, ಇಟ್ಟಿರುವುದನ್ನು ಕಾಣಬಹುದಾಗಿದೆ. ಸ್ಥಳನಾಮಗಳಿಗೆ ಸಂಬಂಧಿಸಿದಂತೆ ಒಂದೊಂದು ಹಳ್ಳಿಗೂ ಒಂದೊಂದು ಐತಿಹ್ಯ ಇರುವುದನ್ನು ಗಮನಿಸಬಹುದಾಗಿದೆ. ರಾಜರ ತಾಯಿಯಾಗಿರಲಿ ಅವರ ಹೆಸರುಗಳನ್ನು ಶಾಶ್ವತವಾಗಿ ಸ್ಮರಿಸಬೇಕೆಂಬ ಉದ್ದೇಶದಿಂದ ಹಳ್ಳಿಗಳಿಗೆ ಹೆಸರನ್ನು ಇಡಲಾಯಿತು.

**ಆಕರ ಗ್ರಂಥಗಳು**


- ನಟರಾಜು ಜೆ.ಆರ್. (2017). ವ್ಯಕ್ತಿನಾಮಗಳ ಚಾರಿತ್ರಿಕ ಅಧ್ಯಯನ. ಅಪ್ರಕಟಿತ ಮಹಾಪ್ರಬಂಧ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.ಸಂ.20.
- ವಿರೂಪಾಕ್ಷಿ ಪೂಜಾರಹಳ್ಳಿ. (2010). ಬೇಡ ನಾಯಕ ಬುಡಕಟ್ಟಿನಲ್ಲಿ ಸತಿ ಪದ್ಧತಿ: ಅವಲೋಕನ. *ಚರಿತ್ರೆ ಅಧ್ಯಯನ.* 5(2) ಪು.ಸಂ.84.
- ಅಮರೇಶ ಯತಗಲ್. (2013). *ಕರ್ನಾಟಕವನ್ನಾಳಿದ ನಾಯಕ ರಾಣಿಯರು ಮತ್ತು ವೀರ ಮಹಿಳೆಯರು.* ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ.
- ಪುಟ್ಟಣ್ಣ ಎಂ.ಎಸ್. (1997). ಚಿತ್ರದುರ್ಗದ ಪಾಳೆಯಗಾರರು ಟಿ.ಎನ್.ಗಂಡುಗಲಿ ಮದಕರಿ ಪ್ರಕಾಶನ, ಚಿತ್ರದುರ್ಗ, ಪು.ಸಂ.133.
- ಶ್ಯಾಮಲ ಸಿ.ಆರ್. (2008). *ಪೂರ್ವ ಕರ್ನಾಟಕದ ಪಾಳೆಯಗಾರರು: ಒಂದು ಅಧ್ಯಯನ.* ಕನ್ನಡ ಸಾಹಿತ್ಯ ಪರಿಷತ್ತು. ಪು. ಸಂ.743.
- ಸದಾಶಿವಪ್ಪ, ಕುಂ. ಬಾ. (2006). *ಹರಪನಹಳ್ಳಿ ಪಾಳೆಯಗಾರರ ಇತಿಹಾಸ ದರ್ಶನ.* ಕನ್ನಡ ಸಾಹಿತ್ಯ ಪರಿಷತ್ತು. ಪು.ಸಂ. 6.
- ಸರಿತಾ. (2019). ನಾಯಕ ಸಂಸ್ಥಾನಗಳ ರಾಣಿಯರು. ಎಂ.ಫಿಲ್ ನಿಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ.59.
- ಯೋಗಾನಂದ ಎಸ್.ಕೆ. (2021). ಬಳ್ಳಾರಿ ಜಿಲ್ಲೆಯ ಬೇಡ ಪಾಳೆಗಾರರ ನಾಗತಿಯರು. ಬಳ್ಳಾರಿ ಜಿಲ್ಲೆಯ ಪಾಳೆಗಾರರ. ಗಾಯತ್ರಿ ಪ್ರಕಾಶನ, ಬಳ್ಳಾರಿ, ಪು. ಸಂ.198.
- ಸಂತೇಬೆನ್ನೂರು ಸುಮತೀಂದ್ರ ನಾಡಿಗ್. (2008). ಸಂತೇಬೆನ್ನೂರು ನಾಯಕರು. ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ಬೆಂಗಳೂರು, ಪು.ಸಂ.40.